# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಚಿಂತನೆ

ಪಿ. ನಾಗರಾಜ
ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.18701408

## ABSTRACT:

ಆಧುನಿಕೋತ್ತರ ಕಾಲಘಟ್ಟದಲ್ಲಿ ಸ್ತ್ರೀವಾದಿ ಚಿಂತನೆಯು ಕೇವಲ ಲಿಂಗ ತಾರತಮ್ಯವನ್ನು ಪ್ರಶ್ನಿಸುವುದಕ್ಕೆ ಸೀಮಿತವಾಗದೆ, ಜನಾಂಗ, ವರ್ಗ ಮತ್ತು ಸಾಮಾಜಿಕ ನೆಲೆಗಳಲ್ಲಿ ಮಹಿಳೆಯ ಅಸ್ಮಿತೆಯನ್ನು ಮರುಶೋಧಿಸುತ್ತಿದೆ. 1960ರ ನಂತರದ ಸಾಹಿತ್ಯಿಕ ಚಳವಳಿಗಳ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯವು ಪಾಶ್ಚಾತ್ಯ ಸಿದ್ಧಾಂತಗಳ ಪ್ರೇರಣೆಯೊಂದಿಗೆ ದೇಶೀಯ ಸಂವೇದನೆಗಳನ್ನು ಮೈಗೂಡಿಸಿಕೊಂಡು ಬೆಳೆದ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮುರಿದು, ಮಹಿಳೆಯರ ಅನುಭವಗಳು, ಸಂಕಟಗಳು ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಅನಾವರಣಗೊಳಿಸುವಲ್ಲಿ ಲೇಖಕಿಯರು ವಹಿಸಿದ ಪಾತ್ರ ಪ್ರಮುಖವಾದುದು. ನಂಜನಗೂಡು ತಿರುಮಲಾಂಬರಿಂದ ಹಿಡಿದು ಸಮಕಾಲೀನ ಬರಹಗಾರ್ತಿಯರವರೆಗೆ ಸ್ತ್ರೀವಾದಿ ಧೋರಣೆಗಳು ಬದಲಾದ ಕ್ರಮ, ಅನುವಾದ ಸಾಹಿತ್ಯದ ಪ್ರಭಾವ ಹಾಗೂ ಬಹುಮುಖಿ ನೆಲೆಗಳ ಶೋಧನೆಯು ಸ್ತ್ರೀಸಂವೇದನೆಯನ್ನು ಗಟ್ಟಿಗೊಳಿಸಿದೆ. ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧದ ಪ್ರತಿರೋಧ ಮತ್ತು ಸಮಾನತೆಯ ಆಶಯಗಳು ಆಧುನಿಕೋತ್ತರ ಸ್ತ್ರೀವಾದದ ಜೀವಾಳವಾಗಿವೆ.

## KEYWORDS:

ಆಧುನಿಕೋತ್ತರ ಸ್ತ್ರೀವಾದ, ಕನ್ನಡ ಮಹಿಳಾ ಸಾಹಿತ್ಯ, ಲಿಂಗ ಸಮಾನತೆ, ಸ್ತ್ರೀ ಸಂವೇದನೆ, ಅಸ್ಮಿತೆ ಮತ್ತು ಪ್ರತಿರೋಧ.

‘ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಚಿಂತನೆ’ – ಈ ವಿಷಯವನ್ನು ಕುರಿತಾಗಿ ಪರಿಶೀಲಿಸುವ ಮೊದಲು ‘ಆಧುನಿಕೋತ್ತರ ಕಾಲ’ ಎನ್ನುವ ಪದಪುಂಜವು ಹೊರಡಿಸುವ ಅರ್ಥವನ್ನು ಅರಿಯುವುದು ಅಗತ್ಯವಾಗಿದೆ. ಆಧುನಿಕೋತ್ತರ ಕಾಲವೆಂದರೆ ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದ ಸಮಯವನ್ನು, ವಿಶೇಷವಾಗಿ 1960ರ ನಂತರದ ಸಮಯವನ್ನು ನಿರ್ದೇಶಿಸುತ್ತದೆ. ಆ ಕಾಲಘಟ್ಟದಲ್ಲಿ ಆಧುನಿಕ ಚಿಂತನೆಗೆ ಪ್ರತಿಯಾಗಿ ಉಗಮವಾದ ಸಾಹಿತ್ಯಿಕವೂ, ಸಾಂಸ್ಕೃತಿಕವೂ ಮತ್ತು ಸೈದ್ಧಾಂತಿಕವೂ ಆದ ಚಳವಳಿಯನ್ನು ಆಧುನಿಕೋತ್ತರ ಚಳವಳಿ ಎಂದು ಗುರುತಿಸಲಾಗುತ್ತದೆ.

ಸ್ತ್ರೀವಾದಿ ಚಿಂತನೆ ಎನ್ನುವುದು ಸರಳವಾಗಿ ಹೇಳುವುದಾದರೆ, ಸ್ತ್ರಿಯರು ಮತ್ತು ಪುರುಷರ ನಡುವೆ ಬದುಕಿನ ಅತ್ಯಂತ ಸಹಜವಾದ ನಡೆಯೆನ್ನುವಂತೆ ಕಾಲಾನುಕಾಲದಿಂದಲೂ ಅಸ್ತಿತ್ವದಲ್ಲಿರುವ ಅಸಮಾನತೆಯನ್ನು ಪ್ರಶ್ನಿಸುತ್ತ, ವಿರೋಧಿಸುತ್ತ, ಹೆಣ್ಣಿನ ಸಬಲೀಕರಣಕ್ಕೆ ಬದುಕಿನಿಂದಲೇ ಮಾರ್ಗಗಳನ್ನು ತೆರೆದುತೋರುತ್ತ ಅವಳ ನಿಜಸ್ಥಿತಿಯನ್ನು ಹಾಗೂ ಅವಳ ಚೈತನ್ಯಶೀಲತೆಯ ಸಾಧ್ಯತೆಗಳನ್ನು ತೆರೆದುತೋರುವ ವ್ಯವಸ್ಥಿತವಾದ ಚಿಂತನಾಕ್ರಮವಾಗಿದೆ.

ಸ್ತ್ರೀವಾದಿ ಚಿಂತನೆಯ ಪ್ರಮುಖ ಸಿದ್ಧಾಂತಗಳನ್ನು ಕೆಳಗಿನಂತೆ ಸೂತ್ರೀಕರಿಸಬಹುದಾಗಿದೆ:

- ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪುರುಷಪ್ರಧಾನ ಮನೋಧರ್ಮಗಳು ಹೇಗೆ ಕಾರ್ಯನಿರ್ವಹಿಸುತ್ತವೆ, ಎನ್ನುವುದನ್ನು ಹಾಗೂ ಸ್ತ್ರೀಯರನ್ನು ಆ ಮನೋಧರ್ಮಗಳು ಪ್ರಭಾವಿಸುವ ಬಗೆಗಳನ್ನು ಸ್ತ್ರೀವಾದಿ ಚಿಂತನೆಯು ವಿಶ್ಲೇಷಿಸುತ್ತದೆ.
- ಮಹಿಳೆಯರ ಅನುಭವಗಳು, ಭಾವನೆಗಳು, ಸಂವೇದನೆಗಳು ಹಾಗೂ ಸಮಾಜದಲ್ಲಿ ಅವುಗಳಿಗೆ ಒದಗುತ್ತಿರುವ ಪ್ರತಿಕ್ರಿಯೆಗಳನ್ನು ಸ್ತ್ರೀವಾದಿ ಚಿಂತನೆಯು ಸೂಕ್ಷ್ಮವಾಗಿ ಗಮನಿಸುತ್ತದೆ.
- ಸಾಂಪ್ರದಾಯಿಕವೂ ರೂಢಿಗತವೂ ಆದ ಸ್ತ್ರೀ–ಪುರುಷ ಅಸಮಾನತೆಯನ್ನು ಅದು ಪ್ರಶ್ನಿಸುತ್ತದೆ ಮತ್ತು ಲಿಂಗ ಸಮಾನತೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ.
- ಕಾಲಾನುಕಾಲದಿಂದ ಅವಜ್ಞೆಗೆ ಗುರಿಯಾಗಿ ಸೀಮಿತವಾದ ಪ್ರಪಂಚದಲ್ಲಿಯೇ ಉಳಿದು ಬಿಟ್ಟಿರುವ ಮಹಿಳೆಯರಿಗೆ ನಾಗರಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ನೀಡುವ ವ್ಯವಸ್ಥೆಯ ನಿರ್ಮಾಣಕ್ಕೆ ಸ್ತ್ರೀವಾದಿ ಚಿಂತನೆಗಳು ಬದ್ಧವಾಗಿವೆ.
- ಹೆಣ್ಣನ್ನು ಭೋಗದ ವಸ್ತುವಾಗಿ ಸಂಕುಚಿತವಾದ ದೃಷ್ಟಿಯಿಂದ ಮಾತ್ರ ನೋಡದೆ ಅವಳನ್ನು ಘನತೆಯ ನೆಲೆಯಲ್ಲಿ ಪರಿಭಾವಿಸುವ ಮನೋಧರ್ಮವನ್ನು ಸ್ತ್ರೀವಾದಿ ಚಿಂತನೆಯು ಬಲವಾಗಿ ಪ್ರತಿಪಾದಿಸುತ್ತದೆ.
- ಹೆಣ್ಣಿನ ಪ್ರಪಂಚದ ಅನನ್ಯವೂ, ಅಸಾಧಾರಣವೂ ಮತ್ತು ಸಾರಯುಕ್ತವೂ ಆದ ಅನುಭವ ಮತ್ತು ದೃಷ್ಟಿಯನ್ನು ಕೃತಿಗಳಲ್ಲಿ ಮೂಡಿಸುವ ಮೂಲಕ ಹೆಣ್ಣು ಹೊಂದಿರುವ ಘನತೆಯ ನೆಲೆಗಳನ್ನು ಅಭಿವ್ಯಕ್ತಿಸುವ ಉಪಕ್ರಮವನ್ನು ಸ್ತ್ರೀವಾದಿ ಚಿಂತನೆಯು ಪ್ರೋತ್ಸಾಹಿಸಿತು.
- ಸ್ತ್ರೀ–ಪುರುಷ ತಾರತಮ್ಯದ ನೆಲೆಗಳನ್ನು ಮಾತ್ರವಲ್ಲದೇ ಸ್ತ್ರೀವಾದವು ಜನಾಂಗ, ವರ್ಗ, ವಿದ್ಯೆ, ಮೊದಲಾದ ನೆಲೆಗಳಲ್ಲಿಯೂ ಸಹ ಹೆಣ್ಣನ್ನು ಯಾವ ರೀತಿಯಲ್ಲಿ ಕಡೆಗಣಿಸಲಾಗಿದೆ ಎನ್ನುವ ಅಂಶಗಳತ್ತ ವಿಶೇಷವಾದ ಬೆಳಕನ್ನು ಚೆಲ್ಲಿತು.

ಸ್ತ್ರೀವಾದ ಎನ್ನುವ ಚಿಂತನೆಯು ಆಧುನಿಕವಾದುದಾದರೂ ಹೆಣ್ಣು ಪ್ರಾಚೀನ ಕಾಲದಿಂದಲೂ ತನ್ನ ಹಕ್ಕುಗಳ ಮೇಲಾಗುತ್ತಲಿದ್ದ ಅತಿಕ್ರಮಣವನ್ನು ಮತ್ತು ಪುರುಷರ ದರ್ಪ, ಅಹಂಕಾರದ ಮನೋಧರ್ಮಗಳನ್ನು ಪ್ರತಿರೋಧಿಸುತ್ತಲೇ ಬಂದಿದ್ದಾಳೆ. ಆದರೆ, ಹೆಣ್ಣು ತನ್ನ ವಿರುದ್ಧದ ನಡೆಗಳಿಗೆ ತೋರಿದ ಪ್ರತಿರೋಧವನ್ನು ಪುರುಷಪ್ರಧಾನ ವ್ಯವಸ್ಥೆಯು ಹತ್ತಿಕ್ಕಿಕೊಂಡೇ ಬಂದಿದೆ. ಕನ್ನಡಕ್ಕೆ ಸೀಮಿತವಾಗಿಯೇ ಹೇಳುವುದಾದರೆ, ಸ್ತ್ರೀವಾದವು ತೊಂಬತ್ತರ ದಶಕದಲ್ಲಿ ಪಾಶ್ಚಾತ್ಯ ಸಿದ್ಧಾಂತಗಳ ಪ್ರೇರಣೆ–ಪ್ರಭಾವಕ್ಕೆ ಸಿಲುಕಿ, ವಿಭಿನ್ನ ಬಗೆಯದಾದ ಮತ್ತು ಪ್ರಗತಿಪರವಾದ ನೋಟವಾಗಿ ವ್ಯಾಪಕವಾದ ಗಮನವನ್ನು ಸೆಳೆದಿರುವುದು ಕಾಣುತ್ತದೆಯಾದರೂ ಅದರ ಮೂಲವನ್ನು ಶೋಧಿಸುತ್ತ ಸಾಗಿದರೆ, ಪುರೋಗಾಮಿಯಾದ ಈ ಬಗೆಯ ದೃಷ್ಟಿಯು ಸ್ತ್ರೀ–ಚಿಂತನೆಯಲ್ಲಿಯೇ ಅಂತರ್ನಿಹಿತವಾಗಿದೆ ಎನ್ನುವ ಅಂಶವು ಕಾಣದಿರದು.

ಸಾಂಪ್ರದಾಯಿಕವಾಗಿ ಸ್ತ್ರೀವಾದಿ ಸಾಹಿತ್ಯವೆಂದರೆ ಹೆಣ್ಣಿನ ಹೆಣ್ತನದ ಘನತೆಗಾಗಿ ದನಿಯೆತ್ತುವುದು ಹಾಗೂ ಕಾಲಾಂತರದ ಮತ್ತು ಬಲವಾಗಿ ಸ್ಥಾಪಿತವಾದ ಪುರುಷಪ್ರಧಾನ ರಚನೆಗಳನ್ನು ಪ್ರಶ್ನಿಸುವುದು ಆಗಿರುತ್ತದೆ. ಮಹಿಳೆಯರ ಅನುಭವಗಳನ್ನು ಒಟ್ಟುಗೂಡಿಸಿ,

ಅದರ ಘನತೆಯನ್ನು ಸ್ಥಾಪಿಸುವ ಮೂಲಕ ಬದುಕಿನ ನಡೆಯಲ್ಲಿ, ಅದರ ನಿರ್ವಹಣೆಯಲ್ಲಿ ಪುರುಷನಷ್ಟೇ ಪಾತ್ರವನ್ನು ಹೆಣ್ಣೂ ಸಹ ಹೊಂದಿದ್ದಾಳೆ ಎಂದು ಸ್ಥಾಪಿಸುವುದು, ಮಹಿಳೆಯರು ಪುರುಷರ ಸಹಜೀವಿಗಳಾಗಿ ಪ್ರಕೃತಿಯ ಸಹಜವಾದ ನ್ಯಾಯದಂತೆ ಹೊಂದಿರುವ ಜೀವನದ ಹಕ್ಕುಗಳಿಗಾಗಿ ಪ್ರತಿಪಾದಿಸುವುದು ಮತ್ತು ಜನಾಂಗ, ವರ್ಗ, ಲೈಂಗಿಕತೆ ಮೊದಲಾದ ಅನೇಕ ಅಂಶಗಳ ನೆಲೆಯಲ್ಲಿ ಬದುಕು ಒಳಗೊಂಡಿರುವ ಸಂಕೀರ್ಣತೆಯ ಹಿನ್ನೆಲೆಯಲ್ಲಿ ಬದುಕನ್ನು ವಿಶ್ಲೇಷಿಸುವ ಮೂಲಕ ಲಿಂಗ ಸಮಾನತೆಯನ್ನು ಪ್ರತಿಪಾದಿಸುವುದು – ಇವೆಲ್ಲವನ್ನೂ ಸ್ತ್ರೀವಾದವು ಒಳಗೊಂಡಿದ್ದರೂ ಆಧುನಿಕೋತ್ತರ ಸ್ತ್ರೀವಾದ ಎನ್ನುವುದು ಒಂದು ಕಡೆ ಆಧುನಿಕೋತ್ತರ ಸಿದ್ಧಾಂತಗಳು ಮತ್ತು ಇನ್ನೊಂದೆಡೆಯಲ್ಲಿ ಸ್ತ್ರೀವಾದಿ ಚಿಂತನೆ – ಇವೆರಡರ ಮೇಳವಾಗಿದೆ. ಮಹಿಳೆಯ ಇಂದಿನ ಅಸಹನೀಯ ಸ್ಥಿತಿಗೆ ಒಂದೇ ಒಂದು ವಿವರಣೆಯನ್ನು ನೀಡುವ ಎಲ್ಲ ಸ್ತ್ರೀವಾದಿ ಚಿಂತನೆಗಳನ್ನೂ ಆಧುನಿಕೋತ್ತರ ಸ್ತ್ರೀವಾದವು ನಿರಾಕರಿಸುತ್ತದೆ, ಅಷ್ಟೇ ಮುಖ್ಯವಾಗಿ ಜೈವಿಕ ನೆಲೆಯಲ್ಲಿ ಸ್ತ್ರೀ–ಪುರುಷರಲ್ಲಿನ ವ್ಯತ್ಯಾಸವನ್ನೂ ಸಹ. ಸತ್ವಶೀಲತೆಯನ್ನು ಅಳೆಯುವ ಮಾನದಂಡವು ಇಂದು ದೈಹಿಕ ಸಾಮರ್ಥ್ಯವಲ್ಲ, ಬದಲಾಗಿ ಬೌದ್ಧಿಕ ಕ್ಷಮತೆ, ಮಾನಸಿಕ ಗಟ್ಟಿತನಗಳಾಗಿವೆ ಎನ್ನುವುದು ಆಧುನಿಕೋತ್ತರ ಸ್ತ್ರೀವಾದಿ ಚಿಂತನೆಯ ನಂಬಿಕೆಯಾಗಿದೆ.

ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಶ್ಯಾಮಲಾದೇವಿ ಬೆಳಗಾಂವಕರ, ಸರಸ್ವತಿಬಾಯಿ ರಾಜವಾಡೆಯವರು, ಶಾಂತಾದೇವಿ ಮಾಳವಾಡ, ಅನುಪಮಾ ನಿರಂಜನ, ಎಸ್.ವಿ. ಪ್ರಭಾವತಿ ಮೊದಲಾದವರ ಸಾಹಿತ್ಯ ಕೃತಿಗಳು ಮತ್ತು ವಿಚಾರಗಳ ಮೂಲಕ ನಿಧಾನವಾಗಿ ತನ್ನ ಅಸ್ತಿತ್ವವನ್ನು ಪ್ರಕಟಿಸಿದ ಸ್ತ್ರೀವಾದಿ ನಿಲುವುಗಳು ಮುಂದೆ ವೈದೇಹಿ, ವಿಜಯಾ ದಬ್ಬೆ, ಬಿ.ಎನ್. ಸುಮಿತ್ರಾಬಾಯಿ, ಎಚ್. ಎಸ್. ಶ್ರೀಮತಿ, ಮಲ್ಲಿಕಾ ಘಂಟಿ, ಗಾಯತ್ರಿ ನಾವಡ, ಸಬೀಹ ಭೂಮಿಗೌಡ, ಗೀತಾ ನಾಗಭೂಷಣ, ಎಂ.ಎಸ್. ಆಶಾದೇವಿ, ಬಿ.ಎಸ್. ವೆಂಕಟಲಕ್ಷ್ಮಿ, ಪ್ರೀತಿ ಶುಭಚಂದ್ರ, ಚಂದ್ರಮತಿ ಸೋಂದಾ, ಬಾನು ಮುಷ್ತಾಕ್, ಧರಣೀದೇವಿ ಮಾಲಗತ್ತಿ, ಕೆ. ಷರೀಫಾ, ಎಚ್. ಎಸ್. ಪಾರ್ವತಿ, ಗಂಗಾ ಪಾದೇಕಲ್, ಗಿರಿಯಮ್ಮ ಶೇಟ್, ಎಂ. ಎಸ್. ವೇದಾ – ಇವರ ವಿಚಾರಗಳ ಬಲದೊಂದಿಗೆ ವಿಸ್ತಾರವನ್ನು ಪಡೆದುಕೊಂಡು ಆಧುನಿಕೋತ್ತರ ಸ್ತ್ರೀವಾದವು ವಿಶಿಷ್ಟವಾದ ಚಿಂತನೆಗಳ ರೂಪದಲ್ಲಿ ನಮ್ಮ ಮುಂದೆ ನಿಂತಿದೆ.

ಪ್ರಸ್ತುತ ದಿನಮಾನಗಳಲ್ಲಿ ಸ್ತ್ರೀವಾದಿ ಚಿಂತನೆಗಳು ಮಹಿಳೆಯು ಸಂವೇದನಾತ್ಮಕ ಭಾಷೆ ಮತ್ತು ಸಂಕೇತಗಳ ಮೂಲಕ ತನ್ನ ಅನುಭವಗಳನ್ನು ಹಾಗೂ ಅವುಗಳಲ್ಲಿ ನಿಹಿತವಾಗಿರುವ ಅರ್ಥದ ವಿವಿಧ ಪದರುಗಳನ್ನು ಬಹಿರಂಗಪಡಿಸುವ ಉಪಕ್ರಮದತ್ತ ವಿಶೇಷವಾದ ಗಮನವನ್ನು ಹರಿಸುತ್ತಿವೆ. ಅಂತೆಯೇ ಆಧುನಿಕ ಜಗತ್ತಿನಲ್ಲಿ ಮಹಿಳಾ ಸಾಹಿತ್ಯವು ವಿಶೇಷವಾದ ಮಹತ್ವವನ್ನು ಪಡೆದುಕೊಂಡಿದೆ. ಜಾಗತಿಕ ಮಟ್ಟದಲ್ಲಿ ಸುಶಿಕ್ಷಿತರಾದ ಸ್ತ್ರೀಯರು ತಮ್ಮ ಬದುಕಿನ ಸ್ವಾತಂತ್ರ್ಯ ಮತ್ತು ತಮ್ಮ ಬದುಕುವ ಹಕ್ಕುಗಳ ಕುರಿತು ತಾಳುತ್ತಿರುವ ವಿಶೇಷವಾದ ಕಾಳಜಿಯು ಸಮಕಾಲೀನ ಸ್ತ್ರೀವಾದಿ ಚಿಂತನೆಯ ವಿಶಿಷ್ಟವಾದ ನೆಲೆಗಳಿಗೆ ಇಂದು ಕಾರಣವಾಗಿವೆ. ಈ ಪ್ರಕ್ರಿಯೆಯ ಅನುರಣನಗಳು ಭಾರತದಲ್ಲಿಯೂ ಬಹಳ ಪ್ರಭಾವಶಾಲಿಯಾಗಿ ಪ್ರಕಟವಾಗುತ್ತಿವೆ.

ಆರಂಭ ಕಾಲದ ನೆಲೆಯಲ್ಲಿ ಸ್ತ್ರೀವಾದಿ ಚಿಂತನೆಯು ಆಶ್ರಯಿಸಿದ್ದ ವ್ಯವಸ್ಥಿತವಲ್ಲದ ಆದರೆ ಜೀವದಾಯಕವಾದ ಚಳವಳಿಗಳ ಆಶ್ರಯದಿಂದ ಬಿಡಿಸಿಕೊಂಡು ಇಂದು ಸ್ತ್ರೀವಾದಿ ಚಿಂತನೆಯು ಗರಿಗೆದರುತ್ತ ಸಾಗಿದೆ. ಅನುಭವಗಳಿಂದ ಪುಷ್ಟಿಗೊಂಡು ತನ್ನ ದಿಗಂತಗಳನ್ನು

ವಿಸ್ತರಿಸುತ್ತಿರುವ ಸಮಕಾಲೀನ ಮಹಿಳಾ ಸಂವೇದನೆಯ ಸ್ವರೂಪವು, ಸಾಹಿತ್ಯದಲ್ಲಿ ತನ್ನದೇ ವಿಶಿಷ್ಟವಾದ ಆವರಣಗಳನ್ನು ಮೂಡಿಸಿಸಿಕೊಳ್ಳುತ್ತಿದೆ. ಇದರ ಫಲವಾಗಿ ಒಂದೇ ಓದಿನಲ್ಲಿ ಕೈಗೆಟುಕದೆಯೇ ಮತ್ತೆಮತ್ತೆ ಓದಿಸಿಕೊಳ್ಳುವಂತಹ ಕೃತಿಗಳ ಸೃಷ್ಟಿಯತ್ತ ಗಮನ ಹರಿದಿದೆ. ಇಂತಹ ಸಾಧ್ಯತೆಗಳನ್ನು ಸಾಕಾರಗೊಳಿಸುವುದು ಬಹು ಸಂಕೀರ್ಣವಾದ ಮತ್ತು ಕ್ರಿಯಾಶೀಲವಾದ ಕಾರ್ಯವಾಗಿದ್ದು ಇಂದು ಸ್ತ್ರೀವಾದಿ ಚಿಂತನೆಯ ಮುಂದಿರುವ ಬಹುದೊಡ್ಡ ಸವಾಲುಗಳಲ್ಲಿ ಇದು ಪ್ರಮುಖವಾಗಿದೆ. ಬಹುಪಾಲು ಬರಹಗಾರ್ತಿಯರ ಗಮನವು ಇದೇ ದಿಕ್ಕಿನಲ್ಲಿ ಇರುವುದು ಅತ್ಯಂತ ಸಂತಸದಾಯಕವಾದ ಬೆಳವಣಿಗೆಯಾಗಿದೆ.

ಅನುಭವಗಳ ವಿಸ್ತಾರದಂತೆಯೇ ಇಂದು ಮಹಿಳಾ ಸಾಹಿತ್ಯದಲ್ಲಿ ಪ್ರಕಟವಾಗುತ್ತಿರುವ ಮತ್ತೊಂದು ಪ್ರಧಾನವಾದ ಅಂಶವೆಂದರೆ ಅದು ಬಹುಮುಖಿಯಾದ ನೆಲೆಗಳ ಶೋಧನೆ ಮತ್ತು ಅದಕ್ಕಾಗಿ ಅಗತ್ಯವಾದ ಆವರಣಗಳನ್ನು ಸೃಷ್ಟಿಸಿಕೊಳ್ಳುವ ಪ್ರಕ್ರಿಯೆ. ಸಮಕಾಲೀನ ಸ್ತ್ರೀಸಂವೇದನೆಯಲ್ಲಿ ಕಂಡುಬರುತ್ತಿರುವ ಮಹತ್ವದ ಅಂಶವಾಗಿ ಇದು ಕಂಡುಬರುತ್ತಿದೆ. ಹೆಣ್ಣನ್ನು ಜೈವಿಕ ನೆಲೆಯಿಂದ ಏಕಮುಖವಾಗಿ ಪರಿಭಾವಿಸಿ ಅವಳ ಅನುಭವಗಳ ವೈವಿಧ್ಯ, ಅವುಗಳ ಆಳ ಮತ್ತು ಅಗಲಗಳನ್ನು ನಿರಾಕರಿಸುತ್ತಲಿದ್ದ ಸಾಂಪ್ರದಾಯಿಕ ನೋಟಕ್ಕೆ ಪ್ರತಿಯಾಗಿ ಇಲ್ಲಿ ಸ್ತ್ರೀತ್ವದ ವಿಭಿನ್ನ ಆಯಾಮಗಳ ಹರಹಿನಿಂದ ಮೂಡುವ ಅನುಭವಗಳ ಉತ್ತರವಿದೆ. ಸಾಮಾಜಿಕ ಮಾನದಂಡಗಳಾದ ಜಾತಿ, ವರ್ಗ, ಸಂಸ್ಕೃತಿಗಳಿಂದ ನಿರ್ದೇಶಿತವಾಗದ ಹಾಗೂ ಅಂತಃಸತ್ವವನ್ನು ಆಧರಿಸಿದ ಮಾನದಂಡಗಳು ಇಲ್ಲಿ ಚೈತನ್ಯಶೀಲತೆಯನ್ನು ನಿರೂಪಿಸುತ್ತವೆ. ಅಂತೆಯೇ ಇಲ್ಲಿ ಪ್ರಕಟವಾಗುವ ಸತ್ವಶೀಲತೆಯಲ್ಲಿಯೂ ವೈವಿಧ್ಯವಿದೆ, ವ್ಯತ್ಯಾಸಗಳಿವೆ. ಮಧ್ಯಮವರ್ಗದ ಸುಶಿಕ್ಷಿತ ಮನೋಧರ್ಮದ ಸೆಲೆಯಿಂದ ಹೊಮ್ಮುತ್ತಿದ್ದ ಸ್ತ್ರೀಸಂವೇದನೆಗಳು ಇಂದು ಗೀತಾ ನಾಗಭೂಷಣ, ಬಿ.ಟಿ.ಜಾಹ್ನವಿ, ದು.ಸರಸ್ವತಿಯಂತಹ ಕೃತಿಕಾರರಲ್ಲಿ ಬಹುಮುಖೀ ನೆಲೆಗಳನ್ನು ಸಾಕಾರಗೊಳಿಸುತ್ತಿವೆ. ಸುಮಂಗಲಾ ಅವರ ಅಭಿವ್ಯಕ್ತಿಗಳಲ್ಲಿ ವರ್ಗದ ನೆಲೆಯಲ್ಲಿನ ಸೂಕ್ಷ್ಮಗಳು ಅನಾವರಣವಾದರೆ ಸವಿತಾ ನಾಗಭೂಷಣ ಅವರು ಕಟ್ಟಿಕೊಡುವ ಸ್ತ್ರೀಲೋಕವು 'ಸ್ತ್ರೀಯರದೆಲ್ಲ ಒಂದೇ ಲೋಕ ಅಲ್ಲ, ಜೈವಿಕತೆಯೂ ಅಲ್ಲಿ ಸಮಾನ ಅಂಶವಲ್ಲ' ಎನ್ನುವ ಮಹತ್ವದ ಅಂಶಕ್ಕೆ ಕನ್ನಡಿಹಿಡಿಯುತ್ತದೆ. ಸಮಾಜವು ಒಪ್ಪಿರುವ ಧರ್ಮ ಎನ್ನುವ ನಿಶ್ಚಿತ ನೆಲೆಯ ಗ್ರಹಿಕೆಯನ್ನು ಬಾನುಮುಷ್ತಾಕ್ ಮೊದಲಾದ ಲೇಖಕಿಯರು ಪರಿಷ್ಕರಣೆಯ ನೆಲೆಯಲ್ಲಿ ಗ್ರಹಿಸುತ್ತ ಪ್ರತಿಭಟನೆಯ ಮೂಲಗಳನ್ನು ಆಶ್ರಯಿಸಿ ಪುರೋಗಾಮಿ ಗುಣಗಳನ್ನು ಸಾಕಾರಗೊಳಿಸುವ ಅಭಿವ್ಯಕ್ತಿಗಳನ್ನು ಪ್ರಸ್ತುತಪಡಿಸುತ್ತಾರೆ.

ಆಧುನಿಕೋತ್ತರ ಸ್ತ್ರೀವಾದಿ ಚಿಂತನೆಗಳ ಒಂದು ಪ್ರಮುಖವಾದ ಅಂಶವೆಂದರೆ ಅದು ಅನುವಾದವನ್ನು ಆಶ್ರಯಿಸಿದ್ದು. ಪಾಶ್ಚಾತ್ಯ ಸ್ತ್ರೀವಾದಿ ಸಿದ್ಧಾಂತಗಳನ್ನು ತಿಳಿಸುವ ಗ್ರಂಥಗಳ ಹಾಗೂ ಮಹಿಳಾ ಅನನ್ಯತೆಯ ನೆಲೆಗಳನ್ನು ಪ್ರಕಟಿಸುವ ಕೃತಿಗಳ ಅನುವಾದದ ಮೂಲಕ ಸಾಹಿತ್ಯಿಕ ಬೆಳವಣಿಗೆಗಳಿಗೆ ಮೂಲ ಸೃಜನಶೀಲ ಬರಹ, ವಿಮರ್ಶೆಗಳಿಗಷ್ಟೇ ಮಹತ್ವದ ಕೊಡುಗೆಯನ್ನು ಅನುವಾದ ಸಾಹಿತ್ಯವೂ ನೀಡಲು ಸಾಧ್ಯ, ಎನ್ನುವ ನಿಜವನ್ನು ಈ ಉಪಕ್ರಮಗಳು ಸಾರಿವೆ. ಈ ನಿಟ್ಟಿನಲ್ಲಿ ಡಾ. ಎಚ್. ಎಸ್. ಶ್ರೀಮತಿ, ಎಂ.ಆರ್. ಕಮಲ ಮೊದಲಾದವರ ಅನುವಾದಗಳು ಸ್ತ್ರೀವಾದದ ಬೆಳವಣಿಗೆಗೆ ಕೊಟ್ಟ ಕೊಡುಗೆಗಳಾಗಿವೆ. ಇದರ ಜೊತೆಗೆ ಸ್ತ್ರೀವಾದಿ ಚಿಂತನೆಯ ಜೀವಸೆಲೆಯಾಗಿ ಅದರ ಹೋರಾಟದ ಕಾವನ್ನು ಉಳಿಸಿಕೊಂಡು ಬರುವಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿರುವ ಪ್ರತಿಭಟನೆಯ ಅಂಶವೂ ತನ್ನ ಇರವನ್ನು ಪ್ರಕಟಿಸುತ್ತಲೇ ಸಾಗಿದೆ. ಪ್ರತಿಭಾ ನಂದಕುಮಾರ್, ಮಲ್ಲಿಕಾ ಘಂಟಿ, ಶಶಿಕಲಾ ವೀರಯ್ಯಸ್ವಾಮಿ, ಗೀತಾ ನಾಗಭೂಷಣ ಇನ್ನೂ ಹಲವಾರು ಲೇಖಕಿಯರಲ್ಲಿ ಈ ರೀತಿಯ

ಪ್ರತಿಭಟನೆಯ ದನಿಗಳು ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿವೆ. ವೀಣಾ ಶಾಂತೇಶ್ವರರ ಕತೆಗಳಲ್ಲೂ ಮತ್ತು ಕೆಲವು ಕವಿತೆಗಳಲ್ಲಿ ಈ ಅಂಶ ಕಾಣಬಹುದು. ಆದರೆ ಕವಿತೆಗಳಲ್ಲಿ ಈ ಅಂಶ ಇನ್ನೂ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಆಧುನಿಕತೆಯು ತನ್ನೊಂದಿಗೆ ಹೊತ್ತುತಂದಿರುವ ಸಮಕಾಲೀನ ಸಂವೇದನೆಗಳ ವಿವಿಧ ಆಯಾಮಗಳಿಗೆ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಜೀವಂತಿಕೆಯ ನೆಲೆಗಳಲ್ಲಿ ಸ್ಪಂದಿಸುತ್ತ ಆಧುನಿಕೋತ್ತರ ಸ್ತ್ರೀವಾದಿ ಚಿಂತನೆಯು ತನ್ನ ನೆಲೆಗಳನ್ನು ಗಟ್ಟಿಗೊಳಿಸಿಕೊಳ್ಳುತ್ತ ಸಾಗಿದೆ. ಬದುಕನ್ನು ಸಾರಯುಕ್ತವಾಗಿಸುವ ನಿಟ್ಟಿನಲ್ಲಿ ಪುರುಷನಿಗೆ ಸಮಾನವಾಗಿ ಕೊಡುಗೆಯನ್ನು ಸಲ್ಲಿಸುವಲ್ಲಿ ಅವಳ ಜೊತೆಯಾಗಿರುವ ಅವಳ ಚೈತನ್ಯಶೀಲತೆಯ ಅನೇಕ ಆಯಾಮಗಳನ್ನು ನಿರಂತರವಾಗಿ ಸಾಕಾರಗೊಳಿಸುತ್ತ ಸಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಶ್ರೀಮತಿ ಎಚ್. ಎಸ್. (ಅನು), (2001), ಆಧುನಿಕ ಭಾರತದಲ್ಲಿ ಮಹಿಳೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ತಾರಿಣಿ ಶುಭದಾಯಿನಿ (ಸಂ), (2013), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ (ವಿಚಾರ ಸಾಹಿತ್ಯ ಸಂಪುಟ – 7), ಬಿಜಾಪುರ: ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.
3. ಶ್ರೀಮತಿ ಎಚ್. ಎಸ್., (2006), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ಗಾಯತ್ರಿ ಎನ್., (1996), ಮಹಿಳೆ – ಬಿಡುಗಡೆಯ ಹಾದಿಯಲ್ಲಿ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
5. ಸುಮಿತ್ರಾ ಬಾಯಿ ಬಿ. ಎನ್. ಮತ್ತು ಗಾಯತ್ರಿ ಎನ್. (ಸಂ), (1992), ವಿಮರ್ಶೆಯ ಹಾದಿ, ಬೆಂಗಳೂರು: ಜಾಗೃತಿ ಪ್ರಕಾಶನ.
6. ಮಂಗಳಾ ಪ್ರಿಯದರ್ಶಿನಿ, (2007), ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ – ಒಂದು ಪ್ರವೇಶಿಕೆ, ಬೆಂಗಳೂರು: ಕಮಲಾಂಗಿನಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.